ಹಾರಂಗಿ ಜಲಾಶಯದ ಕಾಮಗಾರಿ

115(321) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾರಂಗಿ ಜಲಾಶಯದ ಕಾಮಗಾರಿ ಕೆಲಸ ಯಾವ ಹಂತದಲ್ಲಿದೆ;

ಆ) ಇದರ ಕಾಮಗಾರಿಯ ಗುತ್ತಿಗೆಯನ್ನು ಯಾರಿಗೆ ವಹಿಸಲಾಗಿತ್ತು; ಹಾಗೂ ಎಷ್ಟು ಮೊತ್ತದ ಕಾಮಗಾರಿ ನೀಡಲಾಗಿತ್ತು;

ಇ) ಸದರಿ ಕಾಮಗಾರಿಯ ಬಾಬ್ತು ಗುತ್ತಿಗೆಯ ಹಣವನ್ನು ಪಾವತಿಸದಿರುವ ವಿಚಾರ ನಿಜವೇ;

ಈ) ಈ ಬಾಕಿ ಹಣ ಬಿಡುಗಡೆಯಾಗದಿರಲು ಕಾರಣಗಳೇನು;

ಉ) ಗುತ್ತಿಗೆ ಬಾಕಿ ಹಣ ಬಿಡುಗಡೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಊ) ಕೊಡಗು ಜಿಲ್ಲೆಯಲ್ಲಿ ಒಟ್ಟು ಈ ರೀತಿಯ ಎಷ್ಟು ಕಾಮಗಾರಿಗಳ ಗುತ್ತಿಗೆ ಹಣ ಬಾಕಿ ಇದೆ; ಯಾವಾಗ ಪಾವತಿಸಲಾಗುವುದು; (ವಿವರಿಸುವುದು)

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಹಾರಂಗಿ ಜಲಾಶಯದ ಮೂಲ ಅಣೆಕಟ್ಟು ಕಾಮಗಾರಿಗಳನ್ನು 1982 ರಲ್ಲಿ ಪೂರ್ಣಗೊಳಿಸಲಾಗಿರುತ್ತದೆ. ಅಣೆಕಟ್ಟಿನಲ್ಲಿ ನೀರನ್ನು ಶೇಖರಿಸಲಾಗುತ್ತಿದೆ.

ಆ) ಹಾರಂಗಿ ಜಲಾಶಯದ ಮೂಲ ಅಣೆಕಟ್ಟು ಕಾಮಗಾರಿಯನ್ನು ಮೆ; ಬಾಲಾಜಿ ಕನ್‌ಸ್ಟ್ರಕ್ಷನ್ ಗೇಟ್‌ಗಳ ಕಾಮಗಾರಿಯನ್ನು ಮೆ:ಸಿಕ್ಕಾ ಅಂಡ್ ಸಿಕ್ಕಾ ಹಾಗೂ ಮೆ: ತುಂಗಭದ್ರ ಸ್ಟೀಲ್ ಪ್ರಾಡಕ್ಟ್ಸ್ (ಲಿ) ಮತ್ತು ಮಣ್ಣು ಏರಿ ಕಾಮಗಾರಿಯನ್ನು ಮೆ: ನೇಟ್ಟುಪಡಂ ಕಂಪನಿಗಳಿಗೆ ವಹಿಸಲಾಗಿತ್ತು ಒಟ್ಟು ಮೊತ್ತ ರೂ. 10.97 ಕೋಟಿಗಳಾಗಿರುತ್ತದೆ.

ಇ) ಹಾರಂಗಿ ಅಣೆಕಟ್ಟಿನ ಮೂಲ ಕಾಮಗಾರಿಗೆ ಸಂಬಂಧಿಸಿದಂತೆ ಯಾವುದೇ ಹಣ ಪಾವತಿಸಬೇಕಾಗಿರುವುದಿಲ್ಲ.

ಈ) ಈ ಪ್ರಶ್ನೆ ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಉ) ಈ ಪ್ರಶ್ನೆ ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಊ) ಕೊಡಗು ಜಿಲ್ಲೆಯಲ್ಲಿ ಒಟ್ಟು ಹಾರಂಗಿ ಯೋಜನೆಗೆ ಸಂಬಂಧಿಸಿದಂತೆ ಅಭಿವೃದ್ಧಿ ಮತ್ತು ದುರಸ್ಥಿಯ 105 ಕಾಮಗಾರಿಗಳಿದ್ದು ಅದರ ಮೊತ್ತವು ರೂ. 81.45 ಲಕ್ಷ ಬಾಕಿ ಉಳಿದಿದ್ದು, ಜುಲೈ ತಿಂಗಳಲ್ಲಿ ಬಿಡುಗಡೆಯಾಗಿರುವ ಹಣದಲ್ಲಿ ಭಾಗಶಃ ಹಾಗೂ ಉಳಿದ ಹಣವನ್ನು ಹಂತ ಹಂತವಾಗಿ ಪಾವತಿಸಲಾಗುವುದು.

ತೀರ್ಥಹಳ್ಳಿ ಮಾಲತಿ ನದಿಗೆ ಅಣೆಕಟ್ಟು

117(163) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಲತಿ ನದಿಗೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಡ್ಯಾಂ ನಿರ್ಮಾಣ ಮಾಡಿ ತುಂಗಾ ಮೇಲ್ದಂಡೆ ಯೋಜನೆಗೆ ಪೂರಕ ಜಲಾಶಯ ನಿರ್ಮಿಸಲು ಸರ್ಕಾರ ಯೋಚಿಸಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಇದುವರೆಗೆ ಕೈಗೊಂಡ ಕ್ರಮಗಳೇನು;

ಇ) ಇದಕ್ಕಾಗಿ ಎಷ್ಟು ಹಣ ಖರ್ಚು ಮಾಡಲಾಗುವುದು; ಇದಕ್ಕೆ ಪರಿಸರ ಇಲಾಖೆಯ ಅನುಮತಿ ದೊರೆತಿದೆಯೇ;

ಈ) ಈ ಅಣೆಕಟ್ಟಿನಿಂದ ಆಗುಂಬೆ ಭಾಗದ ನಿತ್ಯ ಹರಿದ್ವರ್ಣ ಕಾಡು ಮುಳುಗಿ ಮಳೆಯ ಮೇಲೆ ದುಷ್ಪರಿಣಾಮವಾಗುವುದು ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಅಡಿಕೆಗೆ ಬೆಂಬಲ ಬೆಲೆ

118(164) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಅಡಿಕೆ ಧಾರಣೆ ಕುಸಿತದಿಂದ ತೊಂದರೆಗೆ ಒಳಗಾದ ಬೆಳೆಗಾರರಿಗೆ ಬೆಂಬಲ ಬೆಲೆ ನೀಡಲು ಸರ್ಕಾರ ನಿರ್ಧರಿಸಿದೆಯೆ; ಹಾಗಿದ್ದಲ್ಲಿ, ಯಾವಾಗಿನಿಂದ ಆರಂಭಿಸಲಾಗುವುದು;

ಆ) ಬಿಸಲಯ್ಯ ಸಮಿತಿಯ ವರದಿ ಜಾರಿಗೆ ಬಂದಿದೆಯೆ; ಇದರ ಮುಖ್ಯಾಂಶಗಳೇನು;

ಇ) ಬೆಂಬಲ ಬೇಲೆ ನಿರ್ಧಾರವಾಗಿದ್ದಲ್ಲಿ ಕೆಂಪು ಮತ್ತು ಬಿಳಿ ಅಡಿಕೆಗೆ ಯಾವ ಧಾರಣೆ ನಿರ್ಧಾರ ಮಾಡಲಾಗಿದೆ;

ಈ) ಅಡಿಕೆ ಬೆಳೆಯ ಬೆಲೆ ತೀವ್ರವಾಗಿ ಇಳಿಯುತ್ತಿರುವುದನ್ನು ತಪ್ಪಿಸಲು ಪರ್ಯಾಯ ಉಪಾಯ ಹಾಗೂ ಸಂಶೋಧನೆ ನಡೆಸಲು ಸರ್ಕಾರ ಯೋಚಿಸಿದೆಯೆ?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು):

ಅ) ಭಾರತ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಭಾರತ ಸರ್ಕಾರದ ಅನುಮೋದನೆ ದೊರೆತ ನಂತರ ಮಾರುಕಟ್ಟೆ ಮಧ್ಯಪ್ರದೇಶ ಯೋಜನೆಯನ್ನು ಆರಂಭಿಸಲಾಗುತ್ತದೆ.

ಆ) ಡಾ: ಬಿಸಲಯ್ಯ ಸಮಿತಿಯು ಅಡಿಕೆ ಉತ್ಪಾದನೆ ವೆಚ್ಚವನ್ನು ಲೆಕ್ಕಮಾಡಿದ್ದು ಅದರ ಆಧಾರದ ಮೇರೆಗೆ ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯನ್ನು ಜಾರಿಗೊಳಿಸಲು ಭಾರತ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಅಡಿಕೆ ಚಾಲಿಗೆ ಕರ್ನಾಟಕದಲ್ಲಿ ಪ್ರತಿ ಕಿಲೋಗೆ ರೂ. 65.00 ಉತ್ಪಾದನೆ ವೆಚ್ಚವಾಗಿದೆ ಎಂಬುದು ಪ್ರಮುಖ ಶಿಫಾರಸ್ಸು ಆಗಿರುತ್ತದೆ.